ಒಬ್ಬ ಹುಡುಗನೊಬ್ಬ ಮನೆಯೊಳಗಿಂದ ಬಂದು ಕೇಳಿ ಒಳಕ್ಕೆಹೋದ. ಕೃಷ್ಣಪ್ಪಯ್ಯ ಬಂದಾಗ ಎಂಟು ಗಂಟೆಯಾಗಿತ್ತು. ಒಬ್ಬರೇ ಸಲೀಸಾಗಿ ನಡೆದುಕೊಂಡು ಬಂದು ಆರಾಮ ಕುರ್ಚಿಯಲ್ಲಿ ಕೂತು ಮೂವರನ್ನೂ ಕಣ್ಣು ಕಿರಿದು ಮಾಡಿಕೊಂಡು ದಿಟ್ಟಿಸಿದರು. ಕೃಷ್ಣಪ್ಪಯ್ಯನವರಿಗೆ ನೂರಾ ಮೂರು ವರ್ಷ ಆಗಿದೆ ಅನ್ನೋದು ಸುಳ್ಳಿರಬಹುದು ಎಂದು ಅವರನ್ನು ನೋಡುತ್ತಿದ್ದಂತೆ ಸತ್ಯನಿಗೆ ಅನ್ನಿಸಿತು.

'ಏಳಿ, ಕೈಕಾಲು ತೊಳಕಂಡು ಊಟ ಮಾಡಿ...' ಎಂದು ಕೃಷ್ಣಪ್ಪಯ್ಯ ಹೇಳಿದರು. ಅವರು ಉಪಚಾರಕ್ಕೆ ಹೇಳಿದರೋ ಅಥವಾ ನಿಜವಾಗಿಯೂ ಹೇಳಿದರೋ ಗೊತ್ತಾಗಲಿಲ್ಲ. ಊಟಕ್ಕೆ ಬರ್ತೀವಿ ಅಂತ ಸ್ನೇಹಿತರೊಬ್ಬರಿಗೆ ಹೇಳಿದ್ದೇವೆ ಎಂದು ಸತ್ಯ, ಸುಳ್ಳು ಹೇಳಿದ. ಆಮೇಲೆ ಕೃಷ್ಣಪ್ಪಯ್ಯ, 'ಸರಿ, ಏನು ಬಂದದ್ದು?' ಎಂದು ಕೇಳಿದರು.

ಅಣ್ಣನ ಮಕ್ಕಳ ಅಕಾಲಿಕ ಸಾವು, ಜೋತಿಷಿ ಹೇಳಿದ ಮಾತು, ಮರೆತಿರುವ ಕುಲ ದೇವರು, ಪೂಜೆ, ಹರಕೆ ಇತ್ಯಾದಿಗಳನ್ನು ಅವರ ಪಕ್ಕವೇ ಕೂತು ಸತ್ಯ ಸ್ವಲ್ಪ ದೊಡ್ಡ ಧ್ವನಿಯಲ್ಲಿ ಸಾದ್ಯಂತ ವಿವರಿಸಿದ. ಕೃಷ್ಣಪ್ಪಯ್ಯ ಕಣ್ಣು ಮುಚ್ಚಿಕೊಂಡೇ ಕೇಳಿಸಿಕೊಂಡರು. ಕಣ್ಣು ತೆರೆದು ಮತ್ತೊಮ್ಮೆ ಮೂವರ ಮುಖ ನೋಡಿದರು.

'ನಾನು ಜೋತಿಷಿ ಅಲ್ಲ, ಉಪಾಸಕನೂ ಅಲ್ಲ. ನೂರಾಮೂರು ವರ್ಷ ಬದುಕಿದ್ದೇನೆ ಅಷ್ಟೇ. ನಂಗೆ ಎಲ್ಲವೂ ಗೊತ್ತಿದೆ ಅಂತ ಕೆಲವರು ತಿಳಕಂಡಿದ್ದಾರೆ. ಅಂಥವರೇ ಯಾರೋ ನಿಮ್ಮನ್ನು ನನ್ನ ಬಳಿಗೆ ಕಳಿಸಿರಬಹುದು...' ಎನ್ನುತ್ತ 'ನಿಮ್ಮ ಕುಲ ದೇವರು ಸಾತ್ವಿಕ ನರಸಿಂಹಸ್ವಾಮಿ ಅಂದ್ರಲ್ಲ. ಆ ಹೆಸರು ನನಗೂ ಹೊಸದು. ಉಗ್ರನರಸಿಂಹ, ಲಕ್ಷ್ಮಿ ನರಸಿಂಹನ ಹೆಸರು ಗೊತ್ತು. ನಿಮ್ಮ ಊರಲ್ಲಿ ನರಸಿಂಹ ದೇವರು ಇಲ್ಲವೇ' ಎಂದು ಕೃಷ್ಣಪ್ಪಯ್ಯ ಕೇಳಿದರು.

'ನರಸಿಂಹ ದೇವರು ನಿಮ್ಮ ಜಮೀನಿನಲ್ಲಿ ಬಂಡೆ ಮೇಲೆ ಕೂತಿದ್ದ ಅನ್ನೋದು ನಿಮ್ಮ ಹಿರಿಯರಿಗೆ ಗೊತ್ತಾಗಿದ್ದು ಅವರು ಕಂಡ ಕನಸಿನಲ್ಲಿ. ಆ ಜಮೀನನ್ನು ಯಾರಿಗೋ ಮಾರಾಟ ಮಾಡಿದ್ದೀವಿ ಅಂತ ಹೇಳಿದ್ರಿ. ಅದು ಎಷ್ಟು ಜನರ ಕೈ ದಾಟ ಹೋಗಿದೆಯೋ? ಅಲ್ಲಿ ಏನೇನು ಬದಲಾವಣೆಗಳು ಆಗಿವೆಯೋ? ಈಗ ಅಲ್ಲಿ ದೇವರನ್ನು ಹುಡುಕೋದರಲ್ಲಿ ಅರ್ಥವಿಲ್ಲ. ನಿಮ್ಮ ದೇವರು ಕೂತಿದ್ದ ಬಂಡೆಯನ್ನು ಕಿತ್ತು ಹಾಕಿದ್ದರೆ ಅಲ್ಲಿ ದೇವರಿಲ್ಲ ಅಂತ ಅರ್ಥವೇ? ದೇವರು ಇಲ್ಲದ ಸ್ಥಳ ಎಲ್ಲಿದೆ? ನಿಮ್ಮ ಕುಲದೇವರು ಇನ್ನೂ ಅಲ್ಲೇ ಇದ್ದಾನೆ ಅಂದುಕೊಂಡು ಪೂಜೆ, ಹರಕೆ ಸಲ್ಲಿಸೋದು ನಿಮ್ಮ ಅಣ್ಣನ ಸಮಾಧಾನಕ್ಕಷ್ಟೇ.'

'ಮುಂಬೈನಲ್ಲಿ ಇದ್ದೀನಿ ಅಂತೀರಿ. ಓದಿದ್ದೀರಿ, ನೋಡಿದರೆ ಅನುಕೂಲಸ್ಥರ ಹಾಗೆ ಕಾಣಿಸ್ತೀರಿ. ಆದರೆ ವಿವೇಚನಾ ಶಕ್ತಿಯನ್ನು ಕಳೆದುಕೊಂಡಿದ್ದೀರಿ. ನಿಮ್ಮ ಊರಲ್ಲೇ ಸಣ್ಣದೊಂದು ನರಸಿಂಹ ದೇವರ ಗುಡಿ ಕಟ್ಟಿಸಿ ಅಲ್ಲೇ ಪೂಜೆ ಮಾಡಿ...' ಎಂದು ಷರಾ ಬರೆದ ಹಾಗೆ ಹೇಳಿದರು.

'ಯಾವ ಪಿತೃವೂ ತನ್ನ ಸಂತಾನದವರಿಗೆ ಶಾಪ ಕೊಡಲ್ಲ. ಅಂಥ ಶಕ್ತಿ ಯಾರಿಗೂ ಇಲ್ಲ. ಸತ್ತವರು ಏನಾದರು ಅನ್ನೋದು ಯಾರಿಗೂ ಗೊತ್ತಿಲ್ಲ. ಸತ್ತ ಮೇಲೆ ಎಲ್ಲ ಸಂಬಂಧಗಳೂ ಕೊನೆ ಆಗ್ತವೆ. ಪಾಪ, ಪುಣ್ಯ ಅನ್ನೋದೂ ಇಲ್ಲ. ಸಾವು ಅಂದರೆ ನಿಶ್ಶೇಷ ಅಂತ ಅರ್ಥ. ಏನೂ ಉಳಿಯುಲ್ಲ. ನನ್ನದೇ ಅನುಭವ ಹೇಳ್ತೀನಿ ಕೇಳಿ. ನನ್ನ ಕಣ್ಣೆದುರೇ ನನ್ನ ನಾಲ್ಕು ಮಕ್ಕಳು ಒಬ್ಬರ ನಂತರ ಒಬ್ಬರು ಸತ್ತರು! ಮಕ್ಕಳನ್ನು ಕಳಕೊಂಡದ್ದಕ್ಕೆ ಏನು ಕಾರಣ ಅಂತ ನಾನು ಒಂದು ಕ್ಷಣವೂ ಯೋಚಿಸಲಿಲ್ಲ. ಅವರಿಗೆ ಆಯಸ್ಸು ಇರಲಿಲ್ಲ ಅಷ್ಟೇ. ನಾನು ಇನ್ನೂ ಬದುಕಿದ್ದೇನೆ. ಮಕ್ಕಳೊಂದಿಗೆ ಕಳೆದ ಕ್ಷಣಗಳು ನನ್ನ ನೆನಪಿನಲ್ಲಿವೆ. ನನ್ನ ಸಾವಿನೊಂದಿಗೆ ಅವೂ ನಿಶ್ಶೇಷವಾಗಿ ಬಿಡ್ತವೆ...'ಎಂದರು.

'ಕುಲದೇವರನ್ನು ಹುಡುಕೋ ಸಾಹಸ ನಿಲ್ಲಿಸಿ, ಊರಿಗೆ ಹೋಗಿ. ನಿಮ್ಮಣ್ಣನ ಸಮಾಧಾನಕ್ಕೆ ಪೂಜೆಯೋ, ಹೋಮ,ಹವನವೋ, ಅನ್ನದಾನವೋ ಮತ್ತೊಂದೋ ಮಾಡಿ. ಇದಕ್ಕಿಂತ ಹೆಚ್ಚೇನೂ ಹೇಳಲಾರೆ. ನಂಗೆ ನಿದ್ದೆ ಬರ್ತಿದೆ, ನಾನು ಮಲಗಬೇಕು' ಎನ್ನುತ್ತ ನೀವಿನ್ನು ಹೋಗಬಹುದು ಎನ್ನುವ ಭಾವದಲ್ಲಿ ಹೇಳಿ ಒಳ್ಳೆಯದಾಗಲಿ ಅಂದರು.

ಒಂದೆರಡು ನಿಮಿಷ ಕಳೆದವು.

'ನಾವು ಹೋಗಿ ಬರ್ತೀವಿ...' ಎನ್ನುತ್ತ ಸತ್ಯ ಎದ್ದು ನಿಂತು ಹೇಳಿ ಕೃಷ್ಣಪ್ಪಯ್ಯನವರಿಗೆ ದೀರ್ಘದಂಡ ನಮಸ್ಕಾರ ಮಾಡಿದ. ಮನೆಯಿಂದ ಹೊರ ಬಂದು ಒಮ್ಮೆ ದೀರ್ಘವಾಗಿ ಉಸಿರು ಎಳೆದುಕೊಂಡ. ಅವನ ಮನಸ್ಸಿಗೆ ನಿರಾಳವೆನಿಸಿತು. ●